**ದಿನಾಂಕ : *23-01-2026* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ. ಎಮ್. ಬಿ. ಡಿ ವಕೀಲರಿಂದ:**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇದ್ದು, ನಾನೇ ಹೇಳಿ ಬರೆಸಿದ್ದು, ಅದರಲ್ಲಿನ ಪ್ರಮಾಣ ಕರ್ತನ ಸಹಿಗಳು ನನ್ನದೇ ಇರುತ್ತವೆ.

**ನಾನು ಈ ಕೆಳಕಂಡಂತೆ ದಾಖಲೆಗಳನ್ನು ಗುರುತಿಸುತ್ತೇನೆ.**

ನಿಪಿ-1 ಃ ಪ್ರ.ವ.ವರದಿಯ ದೃಢೀಕೃತ ಪ್ರತಿ

ನಿಪಿ-2 ಃ ದೂರಿನ ದೃಢೀಕೃತ ಪ್ರತಿ

ನಿಪಿ-3 ಃ ಅಂತಿಮ ವರದಿಯ ದೃಢೀಕೃತ ಪ್ರತಿ

ನಿಪಿ-4 ಃ ಪಂಚನಾಮೆಯ ದೃಢೀಕೃತ ಪ್ರತಿ

ನಿಪಿ-5 ಃ ಮೆಡಿಕೋ ಲೀಗಲ್ ಸರ್ಟಿಫಿಕೇಟಿನ ದೃಢೀಕೃತ ಪ್ರತಿ

ನಿಪಿ-6 ಃ ವೈದ್ಯಕೀಯ ಬಿಲ್ಲುಗಳು. (ಒಟ್ಟು- ) ( ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಯಿತು.)

ನಿಪಿ-7 ಃ ವೈದ್ಯಕೀಯ ಸಲಹಾ ಚೀಟಿಗಳು (ಒಟ್ಟು- )

ನಿಪಿ-8 ಃ Power of Attorney

**ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರುತ್ತೇನೆ.**

**ಪಾಟೀ ಸವಾಲು : ಎದುರುದಾರರ ಪರ ಶ್ರೀ ಎಮ್ ಐ ಕೆ ವಕೀಲರಿಂದ**

ದಿನಾಂಕ 01-03-2024 ರಂದು ನಾನು ಮತ್ತು ಗೌರವ್ವ ಶಂಕ್ರಪ್ಪ ಚಲವಾದಿ ರವರು ಸೇರಿ ಕುಂದರಗಿ ಬಸ್ಸ ನಿಲ್ದಾಣದಲ್ಲಿ ಬಸ್ಸ ಹತ್ತಿರುತ್ತೇವೆ. ಆ ದಿನ ನಮ್ಮ ಜೊತೆ 4 ರಿಂದ 5 ಜನ ಹತ್ತಿದ್ದರು. ನಾನು ಹತ್ತಿದ ನಂತರ ನನ್ನ ತಾಯಿ ಬಸ್ಸು ಹತ್ತಲು ಹೋದಾಗ ಬಸ್ಸ ಬಿಟ್ಟಿದ್ದರಿಂದ ನನ್ನ ತಾಯಿ ಕೆಳಗೆ ಬಿದ್ದಿರುತ್ತಾರೆ. ಬಸ್ಸ 2 ಮಾರು ಮುಂದೆ ಹೋಗಿ ನಿಂತಿರುತ್ತದೆ. ಬಸ್ಸನಲ್ಲಿ ಆ ಸಮಯದಲ್ಲಿ ನಾವು

ಇನ್ನೂ ಟಿಕೇಟ ತೆಗೆದುಕೊಂಡಿರಲಿಲ್ಲ. 2 ಮಾರು ಬಸ್ಸ ಮುಂದೆ ಹೋಗಿ ನಿಂತ ನಂತರ ಬಸ್ಸನಿಂದ ನಾನು ಒಬ್ಬಳೇ ಇಳಿದಿರುತ್ತೇನೆ. ನಾನು ಇಳಿದ ನಂತರ ಬಸ್ಸ ಚಾಲಕನು ಬಸ್ಸನ್ನು ಚಲಾಯಿಸಿಕೊಂಡು ಹೋಗಿರುತ್ತಾನೆ. ಬಸ್ಸನ್ನು ನಿಲ್ಲಿಸಲು ಯಾರು ಪ್ರಯತ್ನ ಪಟ್ಟಿರಲಿಲ್ಲ. ಆಗ ಅಂಬೂಲೆನ್ಸನಲ್ಲಿ ನನ್ನ ತಾಯಿಯನ್ನು ಕರೆದುಕೊಂಡು ಗುಳೇದ ಆಸ್ಪತ್ರೆಗೆ ಹೋಗಿರುತ್ತೇವೆ. ಗುಳೇದ ಆಸ್ಪತ್ರೆಯಲ್ಲಿ 7 ದಿನಗಳ ಕಾಲ ಇದ್ದೇವು. 7 ದಿನಗಳ ನಂತರ ನನ್ನ ತಾಯಿಯನ್ನು ಡಿಶ್ಚಾರ್ಜ ಮಾಡಿ ಮನೆಗೆ ಕಳುಹಿಸಿರುತ್ತಾರೆ. 7 ದಿನಗಳ ನಂತರ ಗುಳೇದ ಆಸ್ಪತ್ರೆಗೆ ವಾರಕ್ಕೊಮ್ಮೆ 15 ದಿನಗಳಿಗೊಮ್ಮೆ ನನ್ನ ತಾಯಿಯನ್ನು ಕರೆದುಕೊಂಡು ಹೋಗುತ್ತೇನೆ. ಆಸ್ಪತ್ರೆಗೆ ಹೋಗಿ ಬಂದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಮ್ಯಾಗೇರಿಯಲ್ಲಿ ಮಹಾಂತೇಶ ಎನ್ನುವ ವೈದ್ಯರ ಹತ್ತಿರ ನನ್ನ ತಾಯಿಯನ್ನು ತೋರಿಸಿರುತ್ತೇನೆ. ಮಹಾಂತೇಶ ವೈದ್ಯರು ಯಾವುದೇ ಬಿಲ್ಲುಗಳನ್ನು ಕೊಟ್ಟಿರುವುದಿಲ್ಲ. ಇವತ್ತಿನವರೆಗೂ ಸರಕಾರಿ ಆಸ್ಪತ್ರೆಯಲ್ಲಿ ನನ್ನ ತಾಯಿಯನ್ನು ತೋರಿಸಿರುವುದಿಲ್ಲ. ಅಪಘಾತವಾದ 2 ದಿನಗಳಿಗೆ ನನ್ನ ತಮ್ಮ ದೂರನ್ನು ನೀಡಿರುತ್ತಾನೆ. ದಿನಾಂಕ 01-03-2024 ರಂದು ಗುಳೇದ ಆಸ್ಪತ್ರೆಯವರು ನೀಡಿದ 25,700/- ರೂ. ಬಿಲ್ಲಿಗೆ GST ಮತ್ತು CST ಇರುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಶಾಲೆ ಕಲಿಯದೇ ಇರುವುದರಿಂದ ಬಿಲ್ಲಿನ ಬಗ್ಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಿನಾಂಕ 06-03-2024, 15-03-2024, 01-03-2024 ,02-04-2024, 02-03-2024, 04-05-2024, 04-03-2024, 06-3-2024, 01-03-2024 ಮತ್ತು 06-03-2024 ರ ಬಿಲ್ಲುಗಳಿಗೆ GST ಮತ್ತು CST ಇರುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಶಾಲೆ ಕಲಿಯದೇ ಇರುವುದರಿಂದ ಬಿಲ್ಲಿನ ಬಗ್ಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿಗೆ 65 ವರ್ಷ ವಯಸ್ಸು ಎಂದು ತೋರಿಸಲು ಆಧಾರ ಕಾರ್ಡನ್ನು ಹಾಜರು ಪಡಿಸಿರುತ್ತೇನೆ. ನನ್ನ ತಾಯಿಗೆ ವಯಸ್ಸಾಗಿದ್ದರಿಂದ, ಕಿವಿ ಕೇಳದೇ ಇರುವುದರಿಂದ ಯಾವುದೇ ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ತಿಂಗಳಿಗೆ 20 ಸಾವಿರ ರೂ. ಕೂಲಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಎಲ್ಲೋ ಬಿದ್ದು ಅಪಘಾತ ಪಡಿಸಿಕೊಂಡು ಬಂದು ಎದುರುದಾರರ ಮೇಲೆ ಸುಳ್ಳು ಪ್ರಕರಣವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವಾದ 5 ತಿಂಗಳ ನಂತರ ಎದುರುದಾರರ ಚಾಲಕನ

ಮೇಲೆ ಪ್ರಕರಣವನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಪಘಾತವಾದ 5 ತಿಂಗಳ ನಂತರ ಆರ್ ಟಿ ಓ ರವರು ಬಸ್ಸನ್ನುತಪಾಸಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಸ್ಸ ನಿಲ್ದಾಣ ಹತ್ತಿರ ಸಣ್ಣ ಪುಟ್ಟ ಅಂಗಡಿಗಳು ಇರುತ್ತವೆ ಎಂದರೆ ಸರಿಯಲ್ಲ. ಅಪಘಾತ ಆಗಿರುವ ಕುರಿತು ಬಸ್ಸನಲ್ಲಿ ಇದ್ದ ಪ್ರಯಾಣಿಕರ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿದಾರರು ಆ ದಿನ ಬಸ್ಸ ನಿಲ್ಲಿಸಿರುವುದಿಲ್ಲ ಮತ್ತು ಪ್ರಯಾಣಿಕರು ಯಾರು ಎಂದು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಪೋಲಿಸರ ಜೊತೆ ಶ್ಯಾಮೀಲಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.